ಇಲ್ಲದೆ ಇದ್ದಾಗ ಧೈರ್ಯವಾಗಿ ಬರುತ್ತಾರೆ. ಮಾನ್ಯ ಎಂ.ಎಸ್. ಪಾಟೀಲರೇ, ತಾವು ಬಿಲ್ಲಿನ ಬಗ್ಗೆ, ಸೈಲಿಯಂಟ್ ಫೀಚರ್ಸ್ ಬಗ್ಗೆ ವಿವರಣೆ ಕೊಡಿ ಆಮೇಲೆ ಬೇಕಾದರೆ ಈ ಬಗ್ಗೆ ಕನ್‌ಸಿಡರೇಷನ್ ನಾಳೆ ಮಾಡೋಣ.

4. ಶಾಸನ ರಚನೆ

ಪರ್ಯಾಲೋಚನಾ ಪ್ರಸ್ತಾವ

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 1998.

+ಶ್ರೀ ಎಂ.ಎಸ್. ಪಾಟೀಲ್ (ಮಾನ್ಯ ನಗರಾಭಿವೃದ್ಧಿ ಸಚಿವರು) :— ಮಾನ್ಯ ಅಧ್ಯಕ್ಷರೇ, ಈ ಬಿಲ್ ತರುವ ಸಂದರ್ಭದಲ್ಲಿ ಈ ನಡುವೆ ಕೆಲವೊಂದು ವಿಷಯಗಳು ಪ್ರಸ್ತಾಪವಾದವು. ಆ ರೀತಿ ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ನನ್ನ ವಿಷಯವೂ ಅದರಲ್ಲಿ ಪ್ರಸ್ತಾಪವಾದವು. ಅದು ರಿಕಾರ್ಡ್‌ನಲ್ಲಿದೆ. ಇವರು ಇನ್ನು 4 ದಿವಸದಲ್ಲಿ ಎಲ್ಲಿಗೆ ಹೋಗುತ್ತಾರೋ ಏನೋ ಎನ್ನುವ ಒಂದು ವಿಷಯ ಪ್ರಸ್ತಾಪವಾಯಿತು. ಈ ಸರ್ಕಾರ ಉಳಿಯುತ್ತದೋ ಇಲ್ಲವೋ ಎನ್ನುವ ಕೆಲವರ ಚಿಂತನೆಗಳು ನಡೆಯಿತು. ಆದ್ದರಿಂದ ನಿಮ್ಮ ಮೂಲಕ ನಾನು ಇಲ್ಲಿ ಏನನ್ನು ಹೇಳುವುದಕ್ಕೆ ಇಚ್ಛೆ ಪಡುತ್ತಿದ್ದೇನೆ ಎಂದರೆ ಈ ಸರ್ಕಾರ ಭದ್ರವಾಗಿದೆ. ಈ ಸರ್ಕಾರಕ್ಕೆ ಏನೂ ಆಗುವುದಿಲ್ಲ. ಇನ್ನು 4 ದಿವಸವಲ್ಲ, ಇದು ಅವಧಿ ಮುಗಿಯುವರರೆಗೂ ಈ ಸರ್ಕಾರವಿರುತ್ತದೆ. ಆಮೇಲೂ ಸಹಿತ ನಾವು ಇಲ್ಲೇ ಬಂದು ಕುಳಿತುಕೊಳ್ಳುತ್ತೇವೆ ಎನ್ನುವ ವಿಶ್ವಾಸವೂ ನಮಗೆ ಇದೆ ಎಂದು ಹೇಳುತ್ತಿದ್ದೇನೆ. ಇದರ ಜೊತೆಗೆ ಈ ವಿಚಾರದಲ್ಲಿ ಗೊಂದಲಕ್ಕೆ ಬೀಳತಕ್ಕಂಥದ್ದು ಅನುಮಾನ ಪಡುವುದು ಏನೂ ಅವಶ್ಯಕತೆ ಇಲ್ಲ ಎಂದು ಹೇಳುತ್ತೇನೆ.

(ಆ ಹಂತದಲ್ಲಿ ಮಾನ್ಯ ಶಿವಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ವಾಟಾಳ್ ನಾಗರಾಜ್ :— ತಮ್ಮ ಸಮಾನ ಮನಸ್ಕರ ಸಭೆಯಲ್ಲಿ ತಾವು ಹೇಳಿದ್ದೆಲ್ಲ ಗಾಳಿಗೆ ತೂರಿತು ಎಂತಲೇನು?

ಶ್ರೀ ಎಂ.ಎಸ್. ಪಾಟೀಲ್ :— ನಾನು ಹೇಳುವವರೆಗೂ ಕೇಳಿ. ನಾನು ಇನ್ನು ನನ್ನ ಮಾತನ್ನು ಪೂರ್ಕಿಸಿಲ್ಲ. ಆಮೇಲೆ ಇಲ್ಲಿ ಅಭಿಪ್ರಾಯಗಳ ಬಗ್ಗೆ ಬಂದಿದೆ. ಹಲವಾರು ಜನ ತಮ್ಮಗಳ ಅಭಿಪ್ರಾಯಗಳನ್ನು ವ್ಯಕ್ತಮಾಡುವ ಸ್ವಾತಂತ್ರ್ಯ ಅವರಿಗೆ ಇದೆ ಎಂದು ನಮ್ಮಲ್ಲರ ಭಾವನೆ. ಇಲ್ಲಿ ಎಲ್ಲಿ ಅಭಿಪ್ರಾಯಗಳಿರುತ್ತವೋ ಅಲ್ಲಿ ಕೂಡ ಭಿನ್ನಾಭಿಪ್ರಾಯಗಳಿರುತ್ತವೆ. ಎಲ್ಲಿ ಅಭಿಪ್ರಾಯಗಳಿರುವುದಿಲ್ಲವೋ ಅಲ್ಲಿ ಭಿನ್ನಾಭಿಪ್ರಾಯಗಳ ಪ್ರಶ್ನೆ ಬರುವುದಿಲ್ಲ. ಇಲ್ಲಿ ಯಾರಾದರೂ ವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಮಾತನಾಡುವುದಾಗಲಿ, ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕಾಗಲಿ ಅವಕಾಶವಿದೆ, ಹಾಗೆಯೇ ಅಭಿಪ್ರಾಯಗಳು

ಎಂದೂ ತೀರ್ಮಾನಗಳಲ್ಲ. ತಾವು ಹೇಳುವ ಅಭಿಪ್ರಾಯಗಳು ತೀರ್ಮಾನಗಳಲ್ಲ; ಒಂದು ವೇಳೆ ಆ ತೀರ್ಮಾನ ಪಕ್ಷದ ಸಭೆಯಲ್ಲಿ ತೆಗೆದುಕೊಂಡಾಗ ಮಾತ್ರ ಅದು ತೀರ್ಮಾನವಾಗುತ್ತದೆ. ಅಲ್ಲಿಯವರೆಗೂ ಅದು ಕೇವಲ ಪಕ್ಷದ ಸಭೆಯಲ್ಲಿ ತೆಗೆದುಕೊಂಡಾಗ ಮಾತ್ರ ಅದು ತೀರ್ಮಾನವಾಗುತ್ತದೆ. ಅಲ್ಲಿಯವರೆಗೂ ಅದು ಕೇವಲ ಅಭಿಪ್ರಾಯವಾಗಿರುತ್ತವೆಯೇ ಹೊರತಾಗಿ ಅಂತಿಮ ತೀರ್ಮಾನಗಳಲ್ಲ. ಆದ್ದರಿಂದ ನಮ್ಮ ಪಕ್ಷದಲ್ಲಿ ಸ್ವಾತಂತ್ರತೆ ಇರುವುದರಿಂದ ನಮ್ಮ ವ್ಯಕ್ತವಾದ ಅಭಿಪ್ರಾಯಗಳನ್ನು ಕೊಡುವ ಹಕ್ಕು ಇದೆ. ಕೆಲವೊಂದು ಪಕ್ಷದಲ್ಲಿ ಈ ರೀತಿ ವ್ಯಕ್ತಿ ಸ್ವತಂತ್ರ್ಯ ಇಲ್ಲ. ಅವರ ಅಭಿಪ್ರಾಯ ಕೊಡುವ ಸ್ವಾತಂತ್ರ್ಯ ಸಹಿತ ಇರುವುದಿಲ್ಲ.

ಶ್ರೀ ಎ. ಸುರೇಶ್ ಕುಮಾರ್:— ಅಭಿಪ್ರಾಯ ಸ್ವಾತಂತ್ರ್ಯ ಇದೆ ಎಂದು ಒಪ್ಪಿಕೊಳ್ಳುತ್ತೇನೆ. ಆ ಅಭಿಪ್ರಾಯವನ್ನು ತಿಳಿಸುವುದಕ್ಕೆ ನಿಮಗೆ ಪರಸ್ಪರ ಟೆಲಿಫೋನ್ ಇಲ್ಲವೇ? ನಿಮಗೆ ಪರಸ್ಪರ ಪಕ್ಷದ ವೇದಿಕೆ ಇಲ್ಲವೇ? ಪತ್ರಿಕೆಗಳ ಮೂಲಕ ಏತಕ್ಕೆ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತೀರಿ? ಟಿವಿಗಳ ಮೂಲಕ ಏಕೆ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತೀರಿ? For whose consumption? ಅದು ನಮ್ಮ ಮುಂದಿರುವ ಪ್ರಶ್ನೆ. ಅಥವಾ ನಿಮ್ಮ ಪರ್ಮನೆಂಟ್ ಟೆಲಿಫೋನ್ ಕೆಟ್ಟುಹೋಗಿದೆಯೇ?

(ಗೊಂದಲ)

ಶ್ರೀ ಎ. ಸುರೇಶ್ ಕುಮಾರ್:— ...ನೀವು ಉತ್ತರ ಪ್ರದೇಶದಿಂದ ಅದನೆಲ್ಲ ತರಬೇಡಿ. ನೀವು ಪರಮ ಶ್ರೇಷ್ಠರು ಎಂದು ಬಂದರಲ್ಲ. ಈಗ ಹೇಳಿ.

ಶ್ರೀ ಎಂ.ಸಿ. ನಾಣಯ್ಯ:— ನಮ್ಮ ಪಕ್ಷದಲ್ಲಿರುವುದು ಏನಿದೆಯೋ ಹಾಗೆ ನಾನು ಮಾಡಿಕೊಳ್ಳುತ್ತೇವೆ.

ಶ್ರೀ ಎ. ಸುರೇಶ್ ಕುಮಾರ್:— ಪತ್ರಿಕೆಗಳ ಮೂಲಕ ಮಾತನಾಡುವುದು ಜನತಾದಳದ ಕಾಮನ್ ಫೀಚರ್.

ಶ್ರೀ ಎಂ.ಎಸ್. ಪಾಟೀಲ್:— ನನ್ನ ಹೆಸರು ಬಂದಿದ್ದರಿಂದ ನಾನು ಆ ವಿಷಯವನ್ನು ಹೇಳಬೇಕಾದ ಪರಿಸ್ಥಿತಿ ಬಂತು. ಆದ್ದರಿಂದ ಆ ವಿಷಯವನ್ನು ಅಲ್ಲಿಗೆ ಬಿಡುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:— ಮಾನ್ಯ ಎಂ.ಎಸ್ ಪಾಟೀಲರು ಈ ರಾಜ್ಯದಲ್ಲಿ ಒಂದು ಹೊಸ ದಿಕ್ಕಿಗೆ ನಾಯಕರಾಗಿ ಎಲ್ಲೋ ಬೆಳೆಯುತ್ತಾರೆ ಎಂದು ಇದ್ದೆವು. ಅವರು ತೀರಾ ಜಾರಿ ಬೀಳುತ್ತಿದ್ದೀರಲ್ಲಾ ಇಲ್ಲಿ. ಕೆಳಕ್ಕೆ ಬಿದ್ದುಬಿಟ್ಟರಲ್ಲಾ ನೀವು. ಇದು ನಿಮ್ಮ ಹಣೆಬರಹ! ಹೀಗಾದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ.ಎಸ್ ಪಾಟೀಲ್ :— ಮಾನ್ಯ ಅಧ್ಯಕ್ಷರೇ, ನಾನೀಗ ವಿಷಯಕ್ಕೆ ಬರುತ್ತಿದ್ದೇನೆ. ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ತಂದಿದ್ದೇನೆ. ಈಗಾಗಲೇ ಹೋದ ಸದನದಲ್ಲಿ ಇದು ಮಂಡನೆಯಾಗಿ ಚರ್ಚೆಗೂ ತೆಗೆದುಕೊಂಡಿದ್ದುದು ತಮ್ಮೆಲ್ಲರಿಗೂ ಗೊತ್ತಿರುವ ವಿಷಯ. ಆ ರೀತಿ ಚರ್ಚೆ ನಡೆದ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಉಪ ನಾಯಕರು, ಮಾನ್ಯ ವೀರಪ್ಪ ಮೊಯಿಲಿಯವರು, ಇನ್ನಿತರ ಸದಸ್ಯರು ತಮ್ಮದೇ ಆದ ಕೆಲವು ಅಭಿಪ್ರಾಯಗಳನ್ನು ಇಲ್ಲಿ ವ್ಯಕ್ತಮಾಡಿದರು. ಆ ರೀತಿ ವ್ಯಕ್ತಮಾಡುವ ಹಿನ್ನಲೆಯೊಳಗೆ ನನಗೂ ಸಹ ಕೆಲವೊಂದು ವಿಷಯಗಳು ಸಮಂಜಸ ಎನ್ನುವ ಭಾವನೆ ಬಂತು. ಆ ಮುಖಾಂತರ ಈ ಒಂದು ಅಫಿಷಿಯಲ್ ಆಗಿ ಅಮೆಂಡ್‌ಮೆಂಟ್ ತರುವ ಒಂದು ಪ್ರಯತ್ನವನ್ನು ನಾನು ಮಾಡಿದ್ದೇನೆ. ಅದನ್ನು ನಾನು ಈಗ ತಮ್ಮ ಅನುಮತಿ ಕೋರಿ ಸನ್ಮಾನ್ಯ ಸದಸ್ಯರಿಗೆ ಮಾಹಿತಿ ನೀಡುವ ಬಗ್ಗೆ ತಮ್ಮ ಅಪ್ಪಣೆ ಕೋರುತ್ತಿದ್ದೇನೆ. ಕ್ಲಾಸ್-2 ಇದರ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರರಲ್ಲಿ ನಾನು ಕೇಳಿಕೊಳ್ಳುತ್ತೇನೆ. ಇದು ಇಂಗ್ಲೀಷ್‌ನಲ್ಲಿದೆ. ನಾನೇನು ಇಂಗ್ಲೀಷ್ ವ್ಯಾಮೋಹಿ ಅಲ್ಲ. ಆದರೆ ಇವತ್ತು ಫ್ರಂಟ್ ಆಗಿ ಇಂಗ್ಲೀಷ್‌ನಲ್ಲಿ ಬಂದಿದೆ. ಇಷ್ಟು ಓದಲಿಕ್ಕೆ ಮಾತ್ರ ನಾನು ತಮ್ಮ ಅಪ್ಪಣೆಯನ್ನು ಕೋರುತ್ತೇನೆ.

ಶ್ರೀ ವಾಟಾಳ್ ನಾಗಾರಾಜ್ :— ಇಂಗ್ಲೀಷಿನಲ್ಲಿ ಬೇಡಿ. ನೀವು ಕನ್ನಡದಲ್ಲಿ ಓದಿ. ನಿಮಗೆ ನನಗಿಂತ ಜಾಸ್ತಿ ಮೂರು ಮೈಲಿಯಷ್ಟು ಕನ್ನಡದ ಅಭಿಮಾನ ಇದೆ. ಅದರ ಬಗ್ಗೆ ನನ್ನ ತಕರಾರು ಇಲ್ಲ. ತಾವು ಕನ್ನಡದಲ್ಲೇ ಓದಿ. ಆದರಲ್ಲಿ ಏನೂ ತಪ್ಪಾಗುವುದಿಲ್ಲ.

ಶ್ರೀ ಎಂ.ಎಸ್ ಪಾಟೀಲ್ :— ಎಲ್ಲಾ ಕನ್ನಡದ್ದೇ ಇರತಕ್ಕಂಥಾದ್ದನ್ನು ನಾನು ತರಿಸಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :— ನೀವು ಆಡಳಿತ ಭಾಷೆ ಕನ್ನಡ ಎಂದು ಹೇಳಿ ಅದಕ್ಕೆ ಅಪಮಾನ ಮಾಡುವುದು ಬೇಡ. ಈ ಸದನದಲ್ಲಿ ಏನೆಲ್ಲಾ ಮಸೂದೆಗಳೆಲ್ಲಾ ಕನ್ನಡದಲ್ಲೇ ಬರಲಿ; ತಾವು ಕನ್ನಡದಲ್ಲೇ ಹೇಳಿ. ಯಾರನ್ನೋ ಮೆಚ್ಚಿಸುವುದಕ್ಕೋ, ಒಲ್ಯುವ ಪ್ರಶ್ನೆ ಬೇಡ. ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ ತಾವು ಕನ್ನಡದಲ್ಲಿ ಹೇಳಿ; ತೊಂದರೆಯೇನೂ ಆಗುವುದಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಕನ್ನಡದ ಬಗ್ಗೆ ಸರ್ಕಾರದ ನಿರ್ದಿಷ್ಟವಾದ ನೀತಿಯೇನು ಎಂದು ಕೇಳಿ.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಮಂತ್ರಿಗಳೇ, ನಾವಿಬ್ಬರೂ ವೈಯಕ್ತಿಕವಾಗಿ ಇಲ್ಲಿ ಮಾತನಾಡುವುದು ಬೇಕಿಲ್ಲ. ಈ ರಾಜ್ಯದ ಭಾಷೆ ಕನ್ನಡ. ರಾಜ್ಯದ ನೀತಿಯೇನು?

ಶ್ರೀ ಎಂ.ಎಸ್. ಪಾಟೀಲ್ :— ಕರ್ನಾಟಕದಲ್ಲಿ ಆಡಳಿತ ಭಾಷೆ ಕನ್ನಡ. ಆದರಲ್ಲಿ ಏನೂ ಭಿನ್ನ ಅಭಿಪ್ರಾಯಗಳು ಇಲ್ಲ.

ಶ್ರೀ ವಾಟಾಳ್ ನಾಗರಾಜ್ :— ಕರ್ನಾಟಕದಲ್ಲಿ ಆಡಳಿತ ಭಾಷೆ ಎಲ್ಲಾ ಕನ್ನಡ. ಆದರೆ ಮಾನ್ಯ ಮಂತ್ರಿಗಳು ಓದುವುದೆಲ್ಲಾ ಬರೀ ಇಂಗ್ಲೀಷ್ ಇದು ಯಾವ ನೀತಿ? ಇದಕ್ಕೆ ನೀತಿ ಎಂದು ಹೇಳುತ್ತಾರೆಯೇ? ನೀವು ಕನ್ನಡದಲ್ಲಿ ಮಸೂದೆ ತರುವವರೆಗೂ ಇಂಗ್ಲೀಷ್ ಓದಲೇಬೇಡಿ. ನೀವು ರಾಜ್ಯಭಾಷೆ ಕನ್ನಡ ಎಂದು ಹೇಳಿದ ಮೇಲೆ ಕನ್ನಡದಲ್ಲೇ ಓದಿ.

ಛೇರ್ಮನ್ :— ಅಂಗ್ಲೋ ಎನ್ನುವ ಶಬ್ದ ಕನ್ನಡವೋ ಇಂಗ್ಲೀಷೋ?

ಶ್ರೀ ಸಿ.ಆರ್. ಸಗೀರ್ ಅಹಮದ್ :— ಇಂಗ್ಲೀಷ್. ಕನ್ನಡದಲ್ಲಿ ಬಂದಿರುವ ಪದ. ಇನ್ನೇನು ಮಾಡುವುದಕ್ಕಾಗುತ್ತೆ.

ಶ್ರೀ ವಾಟಾಳ್ ನಾಗರಾಜ್ :— ತಾವು ಕನ್ನಡದಲ್ಲೇ ಓದಿ.

ಶ್ರೀ ಎಂ.ಎಸ್. ಪಾಟೀಲ್ :— ಈಗ ತರಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :— ಅಲ್ಲಿಯವರೆಗೂ ನಿಲ್ಲಿಸಿ. ಆಮೇಲೆ ಮಾಡೋಣ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ನಮ್ಮ ಭಾಷೆಗೆ ಅಗೌರವ ತರುವಂಥಾದ್ದು ಆಗಿದೆ. ಕನ್ನಡದಲ್ಲೇ ತರಿಸುವಂಥಾದ್ದು ಸರ್ಕಾರದ ಕರ್ತವ್ಯ. ನಿಮ್ಮ ಕರ್ತವ್ಯದಲ್ಲಿ ಲೋಪವಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :— ಅದು ಕನ್ನಡದಲ್ಲಿ ತರ್ಜುಮೆಯಾಗಿರುವಂಥದ್ದು ಬರಲಿಕ್ಕೆ ಸ್ವಲ್ಪ ತಡವಾಗುತ್ತಿದೆ. ಅದನ್ನು ಭಾಷಾಂತರಿಸಬೇಕಾಗಿದ್ದರೆ ಈ ಕಾನೂನಿನ ಪದಕೋಶದಲ್ಲಿ ನಿರ್ದಿಷ್ಟತೆ ಎನ್ನುವುದು

4.10 ಪಿ.ಎಂ.

ಬೇಕಾಗುತ್ತದೆ. ಭಾಷಾಂತರದಲ್ಲಿ ಯಾವುದೋ ಪದಗಳನ್ನು ಆದರೆ ಸ್ವಲ್ಪಮಟ್ಟಿಗೆ ಬದಲಾವಣೆ ಮಾಡಬಹುದು. ಪರ್ಟಿಕ್ಯುಲರ್ ಆಗಿ ಒಂದು ಕ್ಲಾಸ್ ಇದ್ದಾಗ ಇಂಗ್ಲೀಷ್‌ಗೆ ಸರಿಸಮಾನವಾದ ಪರಿಭಾಷೆ ಕನ್ನಡದಲ್ಲಿ ತರ್ಜುಮೆ ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :— ಕನ್ನಡ ಭಾಷೆಯಲ್ಲಿರತಕ್ಕ ಶಕ್ತಿ ಬೇರೆ ಯಾವ ಭಾಷೆಯಲ್ಲೂ ಇಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :— ದಯಮಾಡಿ ಕೇಳಿ. ನಿಮ್ಮ ಬಗ್ಗೆ ಬಹಳ ಗೌರವ ಇದೆ. ತಾವು ಕನ್ನಡದ ಬಗ್ಗೆ ಚಿಂತನೆ ಇರತಕ್ಕವರು.

ಶ್ರೀ ಎಂ.ಪಿ. ಪ್ರಕಾಶ್:— ನಾನು ಹೇಳಿದ್ದು ಕನ್ನಡ ಭಾಷೆಯಲ್ಲಿ ನಿರ್ದಿಷ್ಟತೆ ಇಲ್ಲ ಎಂದಲ್ಲ. ನಾನು ಹೇಳಿದ್ದು ಇಂಗ್ಲೀಷ್‌ನಲ್ಲಿರತಕ್ಕದ್ದನ್ನು ತರ್ಜಮೆ ಮಾಡಿದರೆ ಅದರ ನಿರ್ದಿಷ್ಟತೆ ಹೊರಟು ಹೋಗಬಹುದು ಎನ್ನುವ ಕಾರಣಕ್ಕಾಗಿ ಕಾಯುತ್ತಿದ್ದೇನೆ ಎನ್ನುವ ಮಾತು ಹೇಳಿದರು. ಕನ್ನಡದಲ್ಲಿ ಪರಿಭಾಷೆಗೆ ನಿರ್ದಿಷ್ಟತೆ ಇಲ್ಲ ಎಂದು ನಾನು ಹೇಳಲಿಲ್ಲ. ಆದರೆ ತತ್ ಕ್ಷಣದಲ್ಲಿ ಟ್ರಾನ್ಸ್‌ಲೇಟ್ ಮಾಡುವಾಗ ತೊಂದರೆ ಆಗಬಹುದೇನೋ ಎನ್ನುವುದಕ್ಕಾಗಿ ತಮ್ಮ ಪರಿಗಣನೆಗೆ ಕೇಳಿದರು.

ಶ್ರೀ ವಾಟಾಳ್ ನಾಗರಾಜ್:— ಆಯಿತು, ಅದಕ್ಕೆ ಕನ್ನಡದಲ್ಲಿ ಹೇಳಲಿ. ತಪ್ಪೇನು ಇಲ್ಲ, ತರಿಸಿ.

ಶ್ರೀ ಎಂ.ಪಿ. ಪ್ರಕಾಶ್:— ನಿರ್ದಿಷ್ಟತೆ ಇಲ್ಲದಿದ್ದರೆ ತಪ್ಪು ಎಂಬ ಅಭಿಪ್ರಾಯ ಬರುತ್ತದೆ.

ಶ್ರೀ ಎಂ.ಎಸ್ ಪಾಟೀಲ್:— ನಿಮ್ಮ ಕೈಯಲ್ಲಿ ಏನು ಅಮೆಂಡ್‌ಮೆಂಟ್ ಕೊಟ್ಟಿದ್ದೇವೆ, ಅದು ಕನ್ನಡದಲ್ಲಿಯೇ ಇದೆ. ಎಲ್ಲವೂ ಕನ್ನಡದಲ್ಲಿ ಪ್ರಿಂಟ್ ಆಗಿರತಕ್ಕದ್ದು. ಕನ್ನಡದಲ್ಲಿ ತರಬಾರದೆಂಬ ಉದ್ದೇಶ ಅಲ್ಲ. ಈಗ ಕೆಲವೊಂದು ಆ ಸಜೆಷನ್ ಮೇಲೆ ಅವರೇನು ಅಭಿಪ್ರಾಯ ಕೊಟ್ಟರು, ಅದಕ್ಕೆ ಸೀಮಿತವಾಗಿ ಎರಡು ಮೂರು ವಿಚಾರ ಮಾತ್ರ ತಂದಿರತಕ್ಕದ್ದು, ಅದಕ್ಕೇನೂ ವ್ಯತ್ಯಾಸ ಇಲ್ಲ. ಅದಕ್ಕೇ ನಾನು ತಮಗೆ ಪ್ರಾರಂಭದಲ್ಲಿ ಮನವಿ ಮಾಡಿದೆ.

ಶ್ರೀ ವಾಟಾಳ್ ನಾಗರಾಜ್:— ಇದು ಒಳ್ಳೆಯ ನೀತಿ ಆಗುವುದಿಲ್ಲ. ಎಲ್ಲೋ ಒಂದು ಕಡೆ ಸರ್ಕಾರ ಎಚ್ಚರ ಇರಬೇಕಲ್ಲ. ಎಲ್ಲೋ ಒಂದು ಕಡೆ ಕನ್ನಡದ ಬಗ್ಗೆ ಎಚ್ಚರ ಇರಬೇಕಲ್ಲ.

ಶ್ರೀ ಎಂ.ಎಸ್ ಪಾಟೀಲ್:— ಮಾನ್ಯ ವಾಟಾಳ್ ನಾಗರಾಜ್ ಅವರೇ ಹಾಗೇ ನಾನು ಎಚ್ಚವಾಗಿರತಕ್ಕ ಸಂದರ್ಭದಲ್ಲಿಯೇ ನಾನು ಮೊದಲೇ ಕಾಶಿಯಸ್ ಆಗಿ ಹೇಳಿದೆ.

ಶ್ರೀ ವಾಟಾಳ್ ನಾಗರಾಜ್:— ನಾನು ವೈಯಕ್ತಿಕವಾಗಿ ಯಾರನ್ನೂ ದೂಷಣೆ ಮಾಡುತ್ತಿಲ್ಲ. ಇದು ಸರಿಯಲ್ಲ. ಈ ರಾಜ್ಯದ ಭಾಷೆ ಕನ್ನಡ ಎನ್ನುವುದಾದರೆ ಅವರು ಕನ್ನಡದಲ್ಲಿ ಹೇಳಿಲಿ ಇಲ್ಲ ಎಂದರೆ ನಿಲ್ಲಿಸಲಿ. ಐದು ನಿಮಿಷ ಆದ ಮೇಲೆ ಕನ್ನಡದಲ್ಲಿ ಬರಲಿ, ಅವರು ಹೇಳಲಿ

ಶ್ರೀ ಎಂ.ಎಸ್ ಪಾಟೀಲ್:— ತಾವು ಹೇಳುವುದನ್ನು ನಾನು ಒಪ್ಪುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್:— ಇಲ್ಲಿ ಇಂಗ್ಲೀಷ್ ಭಾಷೆಯನ್ನು ಸಹ ಬಳಸಬಹುದು.

ಶ್ರೀ ವಾಟಾಳ್ ನಾಗರಾಜ್ :— ನಾನು ಅದನ್ನು ಏನೂ ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ಇಂಗ್ಲೀಷ್ ಭಾಷೆಯನ್ನು ಬಳಸಬಹುದು, ತಮಿಳು, ತೆಲುಗು, ಮಲಯಾಳವನ್ನೂ ನಾವು ಬಳಸಬಹುದು ಎಂದು ನಾವು ತೀಮಾನ ತೆಗೆದುಕೊಳ್ಳುವುದಾದರೆ ನಮಗೇನೂ ಅಭ್ಯಂತರ ಇಲ್ಲ.

ಶ್ರೀ ಎಂ.ಎಸ್ ಪಾಟೀಲ್ :— ತೀರ್ಮಾನವಲ್ಲ.

ಶ್ರೀ ವಾಟಾಳ್ ನಾಗರಾಜ್ :— ಅದರ ಬಗ್ಗೆ ನನ್ನದೇನೂ ತಕರಾರು ಇಲ್ಲ.

ಶ್ರೀ ಎಂ.ಎಸ್ ಪಾಟೀಲ್ :— ಒಂದು ನಿಮಿಷ ದಯಮಾಡಿ ಕೇಳಿ. ಇದರಲ್ಲಿ ಏನು ಇದೆ? ಮಂಡಲ್ ಪಂಚಾಯತಿ ಎನ್ನತಕ್ಕ ಸ್ಥಳದೊಳಗೆ ಎಲ್ಲೆಲ್ಲಿ ಮಂಡಲ ಪಂಚಾಯತಿ ಎನ್ನತಕ್ಕದ್ದು ಬರುತ್ತದೋ ಅಲ್ಲಿ ಟೌನ್ ಪಂಚಾಯತಿ ಮತ್ತು ಗ್ರಾಮ ಪಂಚಾಯತಿ ಎಂದು ಸೇರಿಸಬೇಕು ಎನ್ನತಕ್ಕದ್ದು ಮೊದಲನೆಯದು. ಅದರ ಅರ್ಥ ಏನು ಅಂದರೆ...

ಶ್ರೀ ವಾಟಾಳ್ ನಾಗರಾಜ್ :— ತಾವು ಅದನ್ನು ತಿರುಗಿಸಿ ಮುರುಗಿಸಿ ಮಾತನಾಡುವುದು ಬೇಡ... ದಯವಿಟ್ಟು ನಾನು ನಿಮಗೆ ಬಹಳ ಕಳಕಳಿಯಿಂದ ಹೇಳುತ್ತಿದ್ದೇನೆ.

ಛೇರ್ಮನ್ :— ಮಾನ್ಯ ನಾಗರಾಜ್‌ರವರೇ, ತಾವು ಆಗ ಕನ್ನಡದ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಕರ್ನಾಟಕದಲ್ಲಿ ಕನ್ನಡ ರಾಜ್ಯ ಭಾಷೆ. ಅದರ ಬಗ್ಗೆ ಯಾರದೂ ಎರಡು ಮಾತಿಲ್ಲ ಅನೇಕ ಸಂದರ್ಭದಲ್ಲಿ ಇಂಗ್ಲೀಷ್‌ನಲ್ಲಿಯೂ ಹೇಳಿದ್ದೇವೆ. ಇಂಗ್ಲೀಷ್‌ನಲ್ಲಿ ಹೇಳಬಾರದು ಎಂದು ಏನೂ ಇಲ್ಲ. ಕನ್ನಡದಲ್ಲಿ ಹೇಳಲೇಬೇಕು.

ಶ್ರೀ ವಾಟಾಳ್ ನಾಗರಾಜ್ :— ಕನ್ನಡ ರಾಜ್ಯ ಭಾಷೆ ಎಂದ ಮೇಲೆ ಇಬ್ಬಂದಿ ನೀತಿಗೆ ಹೋಗಬಾರದು. ಒಂದೇ ನೀತಿ ಇರಬೇಕೇ ಹೊರತು ಎರಡು ನೀತಿ ಮಾಡಬಾರದು. ಅದು ಎಲ್ಲೂ ಹೋಗುವುದಿಲ್ಲ. ಅದರ ಬಗ್ಗೆ ಸ್ಪಷ್ಟತೆ ನಮಗಿರಬೇಕು. ಇಲ್ಲದೇ ಸುಮ್ಮನೇ ನಾವು ಬೂಟಾಟಿಕೆಗೆ ಕನ್ನಡ ಆಡಳಿತ ಭಾಷೆ ಎನ್ನುವುದು ಬೇಡ. ರಾಜಕೀಯವಾಗಿ ಆಡಳಿತ ಭಾಷೆ ಎನ್ನುವುದು ಬೇಡ. ಆಡಳಿತ ಭಾಷೆ ಬಗ್ಗೆ ಪ್ರಾಮಾಣಿಕ ಚಿಂತನೆ ಇದ್ದರೆ, ಆಡಳಿತ ಭಾಷೆ ಬಗ್ಗೆ ನಮಗೆ ಆತ್ಮ ಗೌರವ ಇದ್ದರೆ ಈ ಸರ್ಕಾರದ ನೀತಿ ಇದ್ದರೆ ನೀವು ಕನ್ನಡ ಎಂದು ಹೇಳಿ. ಇಲ್ಲದಿದ್ದರೆ ಬಿಟ್ಟುಬಿಡಿ. ಆದ್ದರಿಂದ ನಿಮ್ಮ ಸರ್ಕಾರದ ನೀತಿಯಂತೆ ನೀವು ಏನು ಬೇಕಾದರೂ ಮಾಡಿಕೊಳ್ಳಿ. ನಾನು ಧರಣಿ ಮಾಡುತ್ತೇನೆ. ಈ ವಿಚಾರದಲ್ಲಿ ಇದು ಒಳ್ಳೆಯ ಸಂಪ್ರದಾಯ ಅಲ್ಲ. ಇದು ಒಳ್ಳೆಯ ನೀತಿ ಅಲ್ಲ. ಇದೇನಿದು?

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ತಮ್ಮ ಸ್ವಸ್ಥಾನ ಬಿಟ್ಟರು ಸಭಾಧ್ಯಕ್ಷರ ಪೀಠದ ಮುಂದೆ ಬಂದರು)

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಯಾವಾಗಲೂ ಎರಡು ಭಾಷೆಯಲ್ಲಿ ತರುತ್ತಿದ್ದರಲ್ಲ. ಈಗ ಏಕೆ ತರಲಿಲ್ಲ?

(ಮಾನ್ಯ ವಾಟಾಳ್ ನಾಗರಾಜ್ ಅವರು ಸ್ವಸ್ಥಾನ ಬಿಟ್ಟು ಮಾತನಾಡುತ್ತಿದ್ದರು)

ಶ್ರೀ ಎಂ.ಸಿ. ನಾಣಯ್ಯ :— ಮಾನ್ಯ ಸಭಾಧ್ಯಕ್ಷರೆ, ಮೂಲ ವಿಧೇಯಕ ಕಂಟ್ರಿ ಅಂಡ್ ಟೌನ್ ಪ್ಲಾನಿಂಗ್ ಆಕ್ಟ್ ಯಾವುದು ಇದೆ, ಅದಕ್ಕೆ ತರುತ್ತಿರತಕ್ಕ ತಿದ್ದುಪಡಿ ಇದು. ಮೂಲ ವಿಧೇಯಕ ಯಾವುದು ಇದೆ ಎಂದರೆ, ಅದನ್ನು ಇವತ್ತು ನಾವು ತರುತ್ತಿಲ್ಲ. ಮೂಲ ವಿಧೇಯಕ ಇಂಗ್ಲೀಷ್‌ನಲ್ಲಿರತಕ್ಕ ವಿಧೇಯಕ. ಅದಕ್ಕೆ ನಾವು ತಿದ್ದುಪಡಿಯನ್ನು ತಂದಾಗ ತಿದ್ದುಪಡಿಯ ತರ್ಜುಮೆಗಳನ್ನು ನಾವು ಕನ್ನಡದಲ್ಲಿ ಕೊಡುತ್ತೇವೆ. ಈ ಒಂದು ತಿದ್ದುಪಡಿಯನ್ನು ತಂದಿರತಕ್ಕದ್ದು, ಮೇಲ್ಮನೆಯಲ್ಲಿ ಈ ತಿದ್ದುಪಡಿ ಬಂದು, ಚರ್ಚೆ ಆಗಿ ಅಂಗೀಕಾರ ಆಗಿ ಈಗ ಇವತ್ತು ಕೆಳಗಿನ ಮನೆಗೆ ಬಂದಿದೆ. ನಿಮಷ್ಟೇ ಕನ್ನಡದ ಅಭಿಮಾನ ನಮಗೂ ಇದೆ. ಒಂದು ವಿಚಾರ ಹೇಳುತ್ತೇನೆ. ನಮಗೆ ಕನ್ನಡದ ಬಗ್ಗೆ ಅಭಿಮಾನ ಮೂರು ಮೈಲಿಯಷ್ಟು ಇದ್ದರೆ ನಿಮಗೆ ನೂರು ಮೈಲಿಯಷ್ಟು ಇರಬಹುದು ಎಂದು ಇಟ್ಟುಕೊಳ್ಳಿ. ಆದರೆ ನಮಗೂ ಕನ್ನಡದ ಬಗ್ಗೆ ಅಭಿಮಾನ ಇದೆ. ಅದರೆ ನಾವು ಹೇಳುವ ವಿಚಾರವನ್ನು ನೀವು ಸಹನೆಯಿಂದ ಕೇಳಿ. ಮೂಲ ವಿಧೇಯಕ ಯಾವುದು ಇದೆ. ಆದರೆ ನಾವು ಹೇಳುವ ವಿಚಾರವನ್ನು ನೀವು ಸಹನೆಯಿಂದ ಕೇಳಿ. ಮೂಲ ವಿಧೇಯಕ ಯಾವುದು ಇದೇ? ನಾವು ತಂದಿರತಕ್ಕದ್ದು ಹೊಸ ವಿಧೇಯಕ ಅಲ್ಲ. ಮೂಲ ವಿಧೇಯಕ 'ಕಂಟ್ರಿ ಅಂಡ್ ಟೌನ್ ಪ್ಲಾನಿಂಗ್ ಆಕ್ಟ್' ಎಂದು ಹೇಳಿರತಕ್ಕದ್ದು ಇಂಗ್ಲೀಷ್‌ನಲ್ಲಿದೆ. ಇದಕ್ಕೆ ತಿದ್ದುಪಡಿಯನ್ನು ತಂದಿದ್ದೇವೆ. ಮೊದಲು ಮಂಡಿಸಿದ್ದೇವೆ. ಮೇಲ್ಮನೆಯಲ್ಲಿ ಮಂಡಿಸಿ ಆ ಬಗ್ಗೆ ಚರ್ಚೆ ಆದಮೇಲೆ ಅಲ್ಲಿ ಅದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದಾರೆ; ಒಪ್ಪಿಗೆ ಕೊಟ್ಟಾದ ಮೇಲೆ ಪುನ: ಈ ಮನೆಗೆ ಬಂದು ಚರ್ಚೆಗೆ ಬಂದಿರತಕ್ಕದ್ದು ಇದೆ. ಅಲ್ಲಿ ತಂದಿರತಕ್ಕ ತಿದ್ದುಪಡಿ ಇಲ್ಲಿಗೆ ಬಂದು ನಾವು ತಿದ್ದುಪಡಿಯನ್ನು ಮಾಡಿದೆವು. ಈ ಸಂದರ್ಭದಲ್ಲಿ ಕೆಲವು ತಿದ್ದುಪಡಿಗಳನ್ನು ಇವರು ತಂದಿದ್ದಾರೆ. ಈಗ ತಿದ್ದುಪಡಿಗಳಿಗೆ ನಾವು ಕೊಡಬೇಕಾಗಿರತಕ್ಕದ್ದು, ಮೂಲ ವಿಧೇಯಕಕ್ಕೆ ಮೊದಲು ತಂದಿರತಕ್ಕ ತಿದ್ದುಪಡಿಯನ್ನು ಕನ್ನಡದಲ್ಲಿಯೂ ಕೊಟ್ಟಿದ್ದೇವೆ. ಮೊದಲು ಯಾವ ತಿದ್ದುಪಡಿಯನ್ನು ತಂದಿದ್ದೇವೆ, ಆ ಆಕ್ಟ್‌ಗೆ ಪೂರ್ತಿಯಾಗಿ ಕನ್ನಡದಲ್ಲಿ ಕೊಟ್ಟಿದ್ದೇವೆ. ಈಗ ಈ ತಿದ್ದುಪಡಿ ಏನು ಇದೆ, ಅದಕ್ಕೆ ತರ್ಜುಮೆ ಮಾಡಿದ್ದೇವೆ. ಈಗ ತಂದಿರತಕ್ಕದ್ದು ತರ್ಜುಮೆ ಮಾಡಬೇಕಾಗಿದ್ದು, ತರ್ಜುಮೆ ಮಾಡಿ ಕನ್ನಡದಲ್ಲೂ ಕೊಡುತ್ತೇವೆ. ನಾವು ಕನ್ನಡಕ್ಕೆ ತರ್ಜಮೆ ಮಾಡಿಕೊಡುವುದಿಲ್ಲ ಎಂದಲ್ಲ. ಆದರೆ ನಾವು ತಿದ್ದುಪಡಿ ಮಾಡಿರತಕ್ಕದ್ದು ಯಾವುದು? ಮುಂದಿನ ಕಾನೂನಿನಲ್ಲಿ ಯಾವುದು ಇತ್ತು, ಮೂಲ ವಿಧೇಯಕದಲ್ಲಿ, ಮಂಡಲ ಪಂಚಾಯಿತಿ ಎಂದು ಇದೆ, ಇವತ್ತು ನಮ್ಮಲ್ಲಿ ಮಂಡಲ ಪಂಚಾಯಿತಿ ಅಸ್ತಿತ್ವದಲ್ಲಿಲ್ಲ. ಮಂಡಲ ಪಂಚಾಯಿತಿ ಅಸ್ತಿತ್ವದಲ್ಲಿ ಇಲ್ಲದೇ ಇರುವುದರಿಂದ ನಾವು ಅದಕ್ಕೆ ತಿದ್ದುಪಡಿಯನ್ನು ಯಾವಾಗ ಹೇಗೆ

ತರಬೇಕು; ಗ್ರಾಮ ಪಂಚಾಯಿತಿ ಮತ್ತು ಟೌನ್ ಪಂಚಾಯಿತಿ ಎಂದು ತರಬೇಕು. ನೀವು ಸರ್ಕಾರ ನಡೆಸಿದ್ದೀರಿ. ಸ್ವಲ್ಪ ಇದನ್ನು ತಡೆ ಹಿಡಿಯಬೇಕು ಎಂದರೆ ತಡೆಹಿಡಿಯೋಣ ಅದನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಕೊಡುತ್ತೇವೆ. ಆದರೆ ಇದರಲ್ಲಿ ನಾವು ಯಾವುದನ್ನು ಸಾಧನೆ ಮಾಡಿದ ಹಾಗೆ ಆಗುತ್ತದೆ ಎಂದು ನೀವೆ ಹೇಳಿ. ಅವರು ಹೇಳಿರತಕ್ಕ ವಿಚಾರವನ್ನು ನಾವು ಒಪ್ಪಿಕೊಂಡಿದ್ದೇವೆ. ನಾವು ಇಲ್ಲ ಎಂದು ಹೇಳುವುದಿಲ್ಲ. ಒಂದು ವಿಚಾರವನ್ನು ದಯವಿಟ್ಟು ತಿಳಿದುಕೊಳ್ಳಿ. ನಾಳೆ ಈ ವಿಧೇಯಕ ಇದೆಯಲ್ಲಾ, ಈ ವಿಧೇಯಕ ಎಲ್ಲಿಯಾದರೂ ಹೋಗಬೇಕಾದರೆ ಇಂಗ್ಲೀಷ್‌ನಲ್ಲಿರತಕ್ಕದ್ದೇ ಮೂಲ ವಿಧೇಯಕ. ಕನ್ನಡದಲ್ಲಿ ಇರತಕ್ಕದ್ದು ಬರೇ ತರ್ಜುಮೆ ಮಾತ್ರ. ಕೆಲವು ಸಂದರ್ಭದಲ್ಲಿ ಮೂಲ ವಿಧೇಯಕವನ್ನು ಕನ್ನಡದಲ್ಲಿ ತರುತ್ತಾರೆ. ಅದು ವಿಧೇಯಕ ಕನ್ನಡದ್ದು. ಇಂಗ್ಲೀಷ್‌ನಲ್ಲಿ ತರ್ಜುಮೆ ಆಗುತ್ತದೆ. ಇದನ್ನು ನಾವು ಹೇಳಿದರೆ ನೀವು ಒಪ್ಪಿಕೊಳ್ಳುವುದಿಲ್ಲ ಎಂದರೆ ಹೇಗೆ.?

ಶ್ರೀ ಎಂ.ಎಸ್ ಪಾಟೀಲ್ :— ಈಗ ಇದು ಕನ್ನಡದಲ್ಲಿಯೇ ಬಂದಿದೆ; ಹೇಳಬಾರದು ಎಂದು ಹೇಳತಕ್ಕದ್ದು ಯಾವುದು ಇರಲಿಲ್ಲ. ಆದರೂ ಕನ್ನಡದ ತರ್ಜಮೆ ಬರಲಿ ಎಂದು ಇತ್ತು. ಖಂಡ- 2. ತಿದ್ದುಪಡಿ ತರತಕ್ಕದರೊಳಗೆ ಖಂಡ - 2

"2ನೇ ಖಂಡದಲ್ಲಿ 2ನೇ ಉಪ ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:-

"ಮಂಡಲ ಪಂಚಾಯಿತಿ" ಎಂಬ ಪದಗಳಿಗೆ "ಪಟ್ಟಣ ಮತ್ತು ಗ್ರಾಮ ಪಂಚಾಯಿತಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು"

ಇನ್ನು ಖಂಡ - 4

4ನೇ ಖಂಡದಲ್ಲಿ ಸೇರಿಸಲು ಉದ್ದೇಶಿಸಲಾದ 14-ಬಿ ಪ್ರಕರಣದಲ್ಲಿ (1)ನೇ ಉಪ ಪ್ರಕರಣದಲ್ಲಿ "ಶೇಕಡಾ ಮೂರರಷ್ಟು ಹೆಚ್ಚಿನ ನೆಲ ಪ್ರದೇಶ ಅನುಪಾತವನ್ನು (ಫ್ಲೋರ್ ಏರಿಯಾ ರೇಷಿಯೋ)" ಎಂಬ ಪದಗಳನ್ನು ಪ್ರಯೋಗಿಸತಕ್ಕದ್ದು.

2ನೇ ಉಪ ಪ್ರಕರಣದಲ್ಲಿ ವಸತಿ ಗೃಹಗಳ ತಾರಾ ಪ್ರವರ್ಗದ ಎಂಬ ಪದಗಳ ತರುವಾಯ "ಶಿಕ್ಷಣ ಸಂಸ್ಥೆಗಳು, ಹೈ-ಟೆಕ್ ಆಸ್ಪತ್ರೆಗಳ ಮತ್ತು ಬ್ಯಾಂಕಿಂಗ್ ಸಂಸ್ಥೆಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು.

ಖಂಡ 5

5ನೇ ಖಂಡದಲ್ಲಿ 2ನೇ ಉಪ ಖಂಡದಲ್ಲಿ ಸೇರಿಸಲು ಉದ್ದೇಶಿಸಲಾದ (3)ನೇ ಉಪ ಪ್ರಕರಣದಲ್ಲಿ "ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಒಡೆತನದಲ್ಲಿರುವ

ಅಥವಾ ನಿಯಂತ್ರಣದಲ್ಲಿರುವ ಯಾವುದೇ ಮಂಡಲಿ ಅಥವಾ ಪ್ರಾಧಿಕಾರ ಅಥವಾ ನಿಕಾಯಕ್ಕೆ" ಎಂಬ ಪದಗಳು ತರುವಾಯ, "ಅಥವಾ ಯಾವುದೇ ಒಂದು ಕಂಪನಿ ಅಥವಾ ಒಬ್ಬ ವ್ಯಕ್ತಿಯು ಪ್ರವರ್ತಿಸಿದ ಅಥವಾ ಕಾರ್ಯಗತ ಗೊಳಿಸಿದ ಮತ್ತು ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರವು ಅನುಮೋದಿಸಿದ ಒಂದು ಮೂಲ, "ಮೂಲ ಸೌಲಭ್ಯ ಯೋಜನೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

ಖಂಡ 6

6ನೇ ಖಂಡದಲ್ಲಿ ಸೇರಿಸಲು ಉದ್ದೇಶಿರುವ 18-8 ಪ್ರಕರಣದಲ್ಲಿ -(1) ಶೀರ್ಷಿಕೆಯಲ್ಲಿ "ನಿರ್ದಿಷ್ಟ ಪ್ರದೇಶಗಳಲ್ಲಿ" ಎಂಬ ಪದಗಳನ್ನು ಬಿಟ್ಟು ಬಿಡತಕ್ಕದ್ದು.

(2) (1)ನೇ ಉಪ-ಪ್ರಕರಣದಲ್ಲಿ "ನಿಯಮಿಸಬಹುದಾದಂತೆ" ಎಂಬ ಪದಗಳ ತರುವಾಯ "ಆದರೆ ಮೇಲಿನ ಎಲ್ಲಾ ವಿಧಿಸುವಿಕೆಗಳು ಸೇರಿದಂತೆ" ಎಂಬ ಪದಗಳನ್ನು ಸೇರಿಸತಕ್ಕದ್ದು, (3) (5)ನೇ ಉಪ-ಪ್ರಕರಣದಲ್ಲಿ "ರಾಜ್ಯ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಮಂಡಲಿ, ಪ್ರಾಧಿಕಾರ ಅಥವಾ ನಿಕಾಯಕ್ಕೆ" ಎಂಬ ಪದಗಳ ತರುವಾಯ "ಅಥವಾ ಯಾವುದೇ ಒಂದು ಕಂಪನಿ ಅಥವಾ ಒಬ್ಬ ವ್ಯಕ್ತಿಯು ಪ್ರವರ್ತಿಸಿದ ಮತ್ತು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರವು ಅನುಮೋದಿಸಿದ ಒಂದು ಮೂಲ ಸೌಲಭ್ಯ ಯೋಜನೆಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

ಖಂಡ -8

ಖಂಡ-8ರಲ್ಲಿ ಸೇರಿಸಲು ಉದ್ದೇಶಿಸಲಾದ 78-ಕೆಎಚ್‌ಎಚ್ ಪ್ರಕರಣದಲ್ಲಿ ನಿರ್ಮಿಸುವ ಕಟ್ಟಡಗಳನ್ನು ಎಂಬ ಪದಗಳಿಗೆ "ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ" ಅಧಿನಿಯಮ 1998ರ ಆರಂಭದ ದಿನಕ್ಕೆ ಮೊದಲು "ನಿರ್ಣಯಿಸಿದ ಕಟ್ಟಡಗಳು" ಎಂಬ ಪದಗಳನ್ನು ಪ್ರಯೋಗಿಸತಕ್ಕದ್ದು.

ಸನ್ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಪ್ರಸ್ತಾಪಿಸಿದಂತೆ ಕಳೆದ ಅಧಿವೇಶನದಲ್ಲಿ ಈ ಕುರಿತು ಚರ್ಚೆ ನಡೆದಾಗ ಮಾನ್ಯ ವಿರೋಧ ಪಕ್ಷದ ನಾಯಕರು, ಉಪ ನಾಯಕರು, ಮಾನ್ಯ ವೀರಪ್ಪ ಮೊಯಿಲಿಯವರು ಹಾಗೂ ಇನ್ನಿತರ ಮಾನ್ಯ ಸದಸ್ಯರುಗಳು ಸದರಿ ವಿಧೇಯಕವನ್ನು ತರತಕ್ಕಂಥ ಸಂದರ್ಭದಲ್ಲಿ ಮಾತನಾಡಿ ತಿದ್ದುಪಡಿಯನ್ನು ಕೆಲವೊಂದು ಅಂಶಗಳಿಗೆ ಸೀಮಿತವಾಗಿ ತಂದಿರುವುದು ತಪ್ಪು ಎನ್ನುವ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಈ ತಿದ್ದುಪಡಿ ವ್ಯಾಪ್ತಿಗೆ ಶಿಕ್ಷಣ ಸಂಸ್ಥೆಗಳನ್ನು ಸೇರಿಸುವುದಾಗಿರಬಹುದು, ಹೈಟೆಕ್ ಆಸ್ಪತ್ರೆಗಳನ್ನು ಸೇರಿಸುವುದಾಗಿರಬಹುದು ಅಥವಾ ಬ್ಯಾಂಕಿಂಗ್ ಕ್ಷೇತ್ರವನ್ನು ಸಹ ಅನ್ವಯಿಸುವ ವಿಷಯವನ್ನು ಈ ಸದನದಲ್ಲಿ ಪ್ರಸ್ತಾಪಿಸಲಾಗಿದೆ. ಇನ್ನು ಸೆಸ್ ಕಲೆಕ್ಟ್ ಮಾಡುವ ವಿಚಾರವಾಗಿ ಹೇಳುವುದಾದರೆ, 1992ನೇ ಇಸವಿಯಿಂದಲೂ ಸಹ ನಗರ ಪ್ರದೇಶಗಳಲ್ಲಿ

ಎಲ್ಲಾ ಕಡೆ ಗವರ್ನಮೆಂಟ್ ಆರ್ಡರ್ ಮೇಲೆ ವಾಟರ್ ಸೆಸ್ ಮತ್ತು ಸ್ಲಮ್ ಏರಿಯಾ ಸೆಸ್‌ಗಳನ್ನು ಸಂಗ್ರಹಿಸಲಾಗುತ್ತಿತ್ತು. ಇದಕ್ಕೆ ಸಂಬಂಧಿಸಿದಂತೆ ಒಂದು ಕಾನೂನು ಸಹ ಇರಲಿಲ್ಲ. ಆದುದರಿಂದ, ಈ ಕುರಿತಂತೆ ಹೈಕೋರ್ಟಿಗೆ ಹೋಗಿ ಸ್ಟೇಡೌನ್ ಆಗಿ ಕ್ಯಾನ್ಸೆಲ್ ಮಾಡುವ ಪರಿಸ್ಥಿತಿಯುಂಟಾಯಿತು. ಹಾಗಾಗಿ ಅಂದಿನಿಂದ ಇಂದಿನವರೆವಿಗೂ ಸೆಸ್ ಅನ್ನು ಕಲೆಕ್ಟ್ ಮಾಡುವುದು ನಿಂತು ಹೋಗಿದ್ದು ಸರ್ಕಾರಕ್ಕೆ ಈಗ ಕೊಡಬೇಕಾಗಿರುವ ಹಲವಾರು ರೀತಿಯ ಸೆಸ್‌ಗಳೇನಿವೆ, ಅದನ್ನು ಸಂಗ್ರಹಿಸುವ ನಿಟ್ಟಿನಲ್ಲಿ ಕಾನೂನಿಗೆ ತಿದ್ದುಪಡಿ ತರುವ ಮುಖಾಂತರ ಸಂಗ್ರಹಿಸುವ ಅಧಿಕಾರದ ವ್ಯವಸ್ಥೆಯನ್ನು ತಂದಿದ್ದೇವೆ. ಇದರ ಜೊತೆಗೆ ಕರ್ನಾಟಕದಲ್ಲಿ ನಾವು ಹಲವಾರು ರೀತಿಯ ಅಭಿವೃದ್ಧಿ ಕಾರ್ಯಕ್ರಮಗಳನ್ನಿ ತೆಗೆದುಕೊಳ್ಳುತ್ತಿದ್ದು, ಉದಾಹರಣೆಗೆ ಬೆಂಗಳೂರು-ಮೈಸೂರು ಹೈವೇ ನಿರ್ಮಾಣ ಕೆಲಸವನ್ನು ನಾವು ಪ್ರೈವೇಟ್ ಮ್ಯಾನೇಜ್‌ಮೆಂಟ್‌ಗೆ ವಹಿಸಿದ್ದು, ಅವರಿಂದ ವಾಟರ್ ಸೆಸ್ ಅನ್ನು ತೆಗೆದುಕೊಳ್ಳುವ ಅವಶ್ಯಕತೆಯಿಲ್ಲ. ಏಕೆಂದರೆ, ಅಲ್ಲಿ ಏನೇನು ಸೌಲಭ್ಯಗಳ ಅಗತ್ಯವಿದೆಯೋ ಅದನ್ನು ಅವರೇ ಮಾಡುವುದರಿಂದ ಅವರಿಗೆ ಸೆಸ್‌ನಿಂದ ವಿನಾಯಿತಿ ಕೊಡಬೇಕೆಂಬ ವಿಷಯವನ್ನು ಇಲ್ಲಿ ಪ್ರಸ್ತಾಪಿಸಿದ್ದೇವೆ. ಅಲ್ಲದೆ, ಯಾವುದೇ ಪ್ರಾಧಿಕಾರವನ್ನು ರಚಿಸಿದ ಸಂದರ್ಭದಲ್ಲಿ ಅವರಿಗೆ ಸಂಪೂರ್ಣ ಅಧಿಕಾರ ಕೊಡತಕ್ಕಂಥ ಪ್ರಸ್ತಾವನೆಯನ್ನೂ ಸಹ ಸದರಿ ತಿದ್ದುಪಡಿಯಲ್ಲಿ ತಂದಿದ್ದೇವೆ. ಕರ್ನಾಟಕದಲ್ಲಿರುವ ನಗರ ಪ್ರದೇಶಗಳ ಅಭಿವೃದ್ಧಿ ದೃಷ್ಟಿಯಿಂದ ಹಾಗೂ ಸರ್ಕಾರಕ್ಕೆ ಆದಾಯ ಬರುವ ದೃಷ್ಟಿಯಿಂದ ನಾವು ಈ ಮಸೂದೆಯನ್ನು ತರುತ್ತಿದ್ದು ಇದಕ್ಕೆ ಮಾನ್ಯ ಸದಸ್ಯರುಗಳೆಲ್ಲರೂ ಒಪ್ಪಿಗೆ ನೀಡಬೇಕೆಂದು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಛೇರ್ಮನ್‌ರವರೆ, ಇದರಲ್ಲಿ ಬಹಳ ಮಹತ್ವದ ಅಂಶಗಳು ಅಡಕವಾಗಿರುವುದರಿಂದ ಮಾನ್ಯ ಸಚಿವರು ವಿಧೇಯಕವನ್ನು ಮಂಡಿಸಲಿ. ನಾಳೆ ಈ ಕುರಿತಾದ ಚರ್ಚೆಗೆ ಅವಕಾಶ ನೀಡಬೇಕೆಂದು ನಾನು ಆಗಲೇ ಸಭಾಧ್ಯಕ್ಷರನ್ನು ಕೇಳಿದ್ದೇನೆ. ಏಕೆಂದರೆ, ನನ್ನ ಒಂದು ಮನವಿಯನ್ನು ತಮ್ಮ ಮುಂದೆ ಇಡಬೇಕಲ್ಲವೇ. ಈ ಸದನದಲ್ಲಿ ಚರ್ಚೆಯಿಲ್ಲದೆ ಆ ವಿಧೇಯಕವನ್ನು ನಾವು ಅಂಗೀಕರಿಸಬಾರದು. ಇವೊತ್ತು ಇದ್ದಕ್ಕಿದ್ದಂತೆ ನಮ್ಮ ಮುಂದೆ ಈ ವಿಧೇಯಕ ಬಂದಿರುವುದರಿಂದ ದಯವಿಟ್ಟು ನಾಳೆ ಚರ್ಚಿಸುವ ಸಲುವಾಗಿ ಅವಧಿಯನ್ನು ನಿಗಧಿಪಡಿಸಿ, ಆ ಸಮಯದಲ್ಲಿ ನಾವೆಲ್ಲಾ ಚರ್ಚೆ ಮಾಡೋಣ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ :— ಮಾನ್ಯ ಛೇರ್ಮನ್‌ರವರೆ, ಸದರಿ ತಿದ್ದುಪಡಿ ವಿಧೇಯಕದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಈ ತಿದ್ದುಪಡಿ ವಿಧೇಯಕವನ್ನು ಇವೊತ್ತು ಈ ಸದನದಲ್ಲಿ ಮಂಡಿಸಿರುವುದರಿಂದ, ನಾಳೆ ಅದರ ಮೇಲೆ ಚರ್ಚೆ ಮಾಡಿ ಅಂಗೀಕರಿಸಿ ಕೊಡುತ್ತೇವೆ.

ಶ್ರೀ ಎಂ.ಎಸ್ ಪಾಟೀಲ್:— ಈ ಹಿಂದೆಯೂ ಸದರಿ ವಿಧೇಯಕದ ಬಗ್ಗೆ ಚರ್ಚೆಯಾಗಿತ್ತು. ಕೊನೇ ಗಳಿಗೆಯಲ್ಲಿ ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ಸಭೆ ಸೇರಿದಾಗ ಇದನ್ನು ಮುಂದೆ ಹಾಕಬೇಕಾದಂಥ ಪ್ರಸಂಗ ಬಂದಿದ್ದರಿಂದ ಇದನ್ನು ಮತ್ತೆ ಈ ಸದನದ ಮುಂದೆ ತರುವ ಸಂದರ್ಭವೊದಗಿದೆ.

ಶ್ರೀ ಎಸ್. ಸುರೇಶ್ ಕುಮಾರ್:— ಇನ್ನು 24 ಗಂಟೆಗಳಲ್ಲಿ ಯಾವುದೇ ಹೈಟೆಕ್ ಆಸ್ಪತ್ರೆಗಳಾಗಲಿ, ಶಿಕ್ಷಣ ಸಂಸ್ಥೆಗಳಾಗಲಿ ಬರುವುದಿಲ್ಲ, ಅಲ್ಲವೇ? ದಯವಿಟ್ಟು ಇದರ ಮೇಲೆ ನಾಳೆ ಚರ್ಚೆಗೆ ತೆಗೆದುಕೊಳ್ಳೋಣ

ಶ್ರೀ ಎಂ.ಸಿ ನಾಣಯ್ಯ:— ಆಯಿತು, ನಾಳೆಯೇ ಚರ್ಚೆಗೆ ತೆಗೆದುಕೊಳ್ಳೋಣ.

5. ಶಾಸನಾತ್ಮಕ ನಿರ್ಣಯ

ಶ್ರೀ ಎಂ.ಎಸ್. ಪಾಟೀಲ್ (ಮಾನ್ಯ ನಗರಾಭಿವೃದ್ಧಿ ಸಚಿವರು):— ಮಾನ್ಯ ಛೇರ್ಮನ್‌ರವರೆ, ನಾನು ಈ ಕೆಳಕಂಡ ನಿರ್ಣಯವನ್ನು ತಮ್ಮ ಅನುಮತಿ ಕೋರಿ ಈ ಸಭೆಯ ಮುಂದೆ ಮಂಡಿಸುತ್ತೇನೆ.

"ಈ ಸದನವು ಭಾರತ ಸಂವಿಧಾನದ 252(2)ರ ಮೇರೆಗೆ ನಗರ ಭೂಮಿ (ಪರಮಾವಧಿ ಮತ್ತು ವಿನಿಮಯ) ನಿರಸನ ಅಧಿನಿಯಮ 1999ನ್ನು (1999ರ ಕೇಂದ್ರ ಅಧಿನಿಯಮ 15) ಅಂಗೀಕರಿಸುವುದು"

ಛೇರ್ಮನ್:— ಪ್ರಸ್ತಾವ ಏನೆಂದರೆ,

"ಈ ಸದನವು ಭಾರತ ಸಂವಿಧಾನದ 252(2)ರ ಮೇರೆಗೆ ನಗರ ಭೂಮಿ (ಪರಮಾವಧಿ ಮತ್ತು ವಿನಿಮಯ) ನಿರಸನ ಅಧಿನಿಯಮ 1999ನ್ನು (1999ರ ಕೇಂದ್ರ ಅಧಿನಿಯಮ 15) ಅಂಗೀಕರಿಸುವುದು"

ಪ್ರಸ್ತಾವ ಮಂಡಿಸಲಾಯಿತು.

4.20 ಪಿ.ಎಂ.

ಶ್ರೀ ಎಂ.ಎಸ್. ಪಾಟೀಲ್ (ಮಾನ್ಯ ನಗರಾಭಿವೃದ್ಧಿ ಸಚಿವರು):— ಮಾನ್ಯ ಛೇರ್ಮನ್‌ರವರೆ. ನಗರ ಭೂಮಿತಿ ಕಾಯ್ದೆಯನ್ನು 1976ರಲ್ಲಿ ಜಾರಿಗೆ ತಂದನಂತರ ಇಲ್ಲಿಯವರೆವಿಗೂ ಸಹ ಯಾವುದೇ ಕಾರ್ಯಕ್ರಮವಾಗಿಲ್ಲ. ಕರ್ನಾಟಕ ಐದು ಪಟ್ಟಮ ಪ್ರದೇಶ (ಬೆಂಗಳೂರು, ಮಂಗಳೂರು, ಮೈಸೂರು, ಬೆಳಗಾಂ ಮತ್ತು ಹುಬ್ಬಳ್ಳಿ-ಧಾರವಾಡ)ಗಳಿಗೆ ಸಂಬಂಧಿಸಿದಂತೆ ಮಾತ್ರ ಇದು ಸೀಮಿತವಾಗಿದ್ದು, ಇಷ್ಟು ದಿವಸಗಳವರೆಗೆ ಯಾವುದೇ